**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ ನಂ. 8325/2022**

ಸಿ.ಡಬ್ಲ್ಯೂ -1
ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ನಾಗಪ್ಪ |
| ತಂದೆ:ಗಂಡ | ಃ | ಭೋಗಪ್ಪ |
| ವಯಸ್ಸು | ಃ | 57 ವರ್ಷ |
| ಉದ್ಯೋಗ | ಃ | ಪಂಪ ಆಪರೇಟರ, ಗ್ರಾಮ ಪಂಚಾಯತ, ನರೋಣಾ |
| ವಾಸಸ್ಥಳ | ಃ | ನರೋಣಾ |

ದಿನಾಂಕಃ24.07.2023
ಸತ್ಯ ಪ್ರತಿಜ್ಞೆಯ ಮೇರೆಗೆ.

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-2 ರಿಂದ 6, 10 ರಿಂದ 12 ರವರ ಪರಿಚಯ ಇರುತ್ತದೆ. ಚಾಸಾ-7 ರವರ ಪರಿಚಯ ಇರುವುದಿಲ್ಲ. ಚಾಸಾ-9 ನನ್ನ ಹೆಂಡತಿ, ಮೃತ ಭಗವಂತ ನನ್ನ ಮಗ. ನನಗೆ ಕಾಲು ನೋವು ಇದ್ದ ಕಾರಣ ನನ್ನ ಪರವಾಗಿ ನನ್ನ ಮಗ ನೀರು ಬೀಡಲು ಕುಶಪ್ಪ ತಾಂಡಾಕ್ಕೆ ಹೋಗುತ್ತಿದ್ದನು. ನನ್ನ ಮಗ ಮನೆಯಿಂದ ಹೊರಟಾಗ 6.45 ಆಗಿರುತ್ತದೆ. ಮುಂದೆ ಚಾಸಾ-6 ರವರು ನನಗೆ ಕರೆ ಮಾಡಿ ನಿಮ್ಮ ಮಗನಿಗೆ ಅಪಘಾತವಾಗಿ ತೀವ್ರ ರಕ್ತಸ್ರಾವವಾಗಿ ಸ್ಥಳದಲಿಯೇ ಮೃತಪಟರುತ್ತಾರೆ ಎಂದು ತಿಳಿಸಿದರು. ಚಾಸಾ-10 ರಿಂದ 12 ರವರು ಹಾಗೂ ನಾನು ನನ್ನ ಹೆಂಡತಿ ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ಮಗ ನೆಲದ ಮೇಲೆ ಬಿದ್ದು ತೀವ್ರ ರಕ್ತಸ್ರಾವ ಆಗಿತ್ತು. ಒಂದು ಕ್ರೂಸರ ರಾಂಗ ಸೈಡನಿಂದ ಅತಿ ವೇಗವಾಗಿ ಬಂದು ನನ್ನ ಮಗ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ್ದ ಕಾರ ಅಪಘಾತವಾಗಿದ್ದು ಅಪಘಾತವಾದ ನಂತರ ವಾಹನ ಚಾಲಕ ಅಲ್ಲಿಂದ ಕೂರಸರ ಬಿಟ್ಟು ಓಡಿ ಹೋಗಿರುತ್ತಾನೆ ಎಂದು ಹೇಳಿದರು. ನಾವು ನಂತರ ಪೋಲಿಸ ಠಾಣೆಗೆ ಹೋಗಿ ದೂರು ನೀಡಿದೇವು. ಪೋಲಿಸರು ಬಂದು ಮೃತ ದೇಹವನ್ನು ಆಸ್ಪತ್ರೆಗೆ ಕಳುಹಿಸಿಕೊಟಿರುತ್ತಾರೆ. ಸಾಕ್ಷಿಗೆ ಈಗ ಅವರು ನೀಡಿದ ದೂರನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾ ಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.29.05.2022 ರಂದು ಸದರಿ ಘಟನೆ ನಡೆಯಿತು ಎಂದರೆ ಸರಿ. ನನ್ನ ಮಗ ಚಲಾಯಿಸುತ್ತಿದ್ದ ವಾಹನದ ಸಂಖ್ಯೆ ಕೆಎ-32/ಇಸಿ-4466 ಎಂದರೆ ಸರಿ. ಅಪಘಾತಪಡಿಸಿದ ಕ್ರೂಸರ ಸಂಖ್ಯೆ ಕೆಎ-48/ಎಂ-0521 ಎಂದರೆ ಸರಿ. ನಾನು ನಂತರ ವಿಚಾರಿಸಿದಾಗ ಚಾಸಾ-6 ರವರು ಆರೋಪಿ ಅಪಘಾತಪಡಿಸಿದ್ದು ಎಂದು ತಿಳಿಸಿದನು.

**ಪಾಟೀ ಸವಾಲು ಆರೋಪಿಗಳ ಪರ ಶ್ರೀ ಎಸ.ಎಸ.ಸಿ. ವಕೀಲರಿಂದ.**

ನನಗೆ ಕುಶಪ್ಪ ತಾಂಡಾದಲ್ಲಿ ನೀರು ಬೀಡಲು ಪಂಚಾಯತಿಯಿಂದ ಆದೇಶ ಇತ್ತು ಎಂದರೆ ಸರಿ. ನಾನು ಪಂಪ ಆಪರೇಟರ ಎಂದರೆ ಸರಿ. ನಾನು ಕುಶಪ್ಪ ತಾಂಡಾದ ಪಂಪ ಆಪರೇಟರ ಇರುವ ಬಗ್ಗೆ ದೂರು ನೀಡುವಾಗ ಆದೇಶವನ್ನು ಪೋಲಿಸರಿಗೆ ನೀಡಿರುವುದಿಲ್ಲ. ನನ್ನ ಕಾಲು ನೋವು ಇದ್ದ ಬಗ್ಗೆ ಪೋಲಿಸರಿಗೆ ಆಸ್ಪತ್ರೆ ದಾಖಲೆಗಳನ್ನು ನಾನು ನೀಡಿರುವುದಿಲ್ಲ. ಚಾಸಾ-**6** ರವರು ನಮ್ಮ ಊರಿನವರು ಎಂದರೆ ಸರಿ. ಚಾಸಾ-**6** ರವರು ನಮ್ಮ ಬೀಗರು ಎಂದರೆ ಸರಿಯಲ್ಲ. ನಮ್ಮ ಸಮಾಜದವರು ಎಂದರೆ ಸರಿಯಲ್ಲ.ಚಾಸಾ-**6** ರವರು ನಮಗೇ ಬೇಕಾದವರು ಎಂದರೆ ಸರಿಯಲ್ಲ. ಅಪಘಾತವನ್ನು ನಾನಾಗಲೀ ಚಾಸಾ-**9** ರಿಂದ **12** ರವರಾಗಲೀ ಕಾಣ್ಣಾರೇ ನೋಡಿರುವುದಿಲ್ಲ ಎಂದರೆ ಸರಿ. ನನಗೆ ಆರೋಪಿ ರಾಂಗ ಸೈಡನಿಂದ ಬಂದಿರುವುದು ಹಾಗೂ ವೇಗವಾಗಿ ಬಂದಿರುವುದು ಚಾಸಾ-**6** ರವರಿಂದ ಗೊತ್ತಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ಥಳವನ್ನು ನೋಡಿದಾಗಲೂ ಆರೋಪಿ ವಾಹನ ರಾಂಗ ಸೈಡನಲ್ಲಿ ಇತ್ತು ಎಂದು ಹೇಳುತ್ತಾರೆ. ನಾನು ಆರೋಪಿಯನ್ನು ನ್ಯಾಯಾಲಯಕ್ಕೆ ಬಂದಾಗಷ್ಟೆ ನೋಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ನಾನು ಆರೋಪಿಯನ್ನು ಕುಶಪ್ಪನ ತಾಂಡಾದಲ್ಲಿ ನೋಡಿರುತ್ತೇನೆ ಎಂದು ಬರೆಸಿರುವುದಿಲ್ಲ. ನನ್ನ ಮಗನೇ ವಾಹನವನ್ನು ಅತಿ ವೇಗವಾಗಿ ಮತ್ತು ನಿಶ್ಕಾಳಜಿತನದಿಂದ ರಾಂಗ ಸೈಡನಿಂದ ಬಂದು ಆರೋಪಿ ನಡೆಸುತ್ತಿದ್ದ ಕ್ರೂಸರಗೇ ಡಿಕ್ಕಿಪಡಿಸಿ ಮೃತ ಹೊಂದಿರುತ್ತಾನೆ ಎಂದರೆ ಸರಿಯಲ್ಲ. ನಾನು **3** ನೇ ತರಗತಿವರೆಗೆ ಶಾಲೆ ಕಲಿತಿರುತ್ತೇನೆ. ಸಾಮಾನ್ಯವಾಗಿ ವಾಹನಗಳು ಚಾಲಕನ ಎಡಗಡೆಯಿಂದ ಹೊಗುತ್ತಿದ್ದು ಬಲಗಡೆಯಿಂದ ಹೋದರೆ ರಾಂಗಸೈಡ ಆಗುತ್ತದೆ ಎಂದರೆ ಸರಿ. ನಮ್ಮ ಪ್ರಕಾರ ಆರೇಪಿ ರಾಂಗ ಸೈಡನಿಂದ ಬಂದಿದ್ದರೇ ಅವನ ಕ್ರೂಸರ ಎಡಗಡೆ ಜಖಂಗೊಂಡಿರುತ್ತದೆ ಎಂದರೆ ಸಾಕ್ಷಿ ಕ್ರೂಸರ ಎಡಗಡೆ ಜಖಂ ಗೊಂಡಿದೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಒಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿ ಕ್ರೂಸರ ಬಲಗಡೆಯ ಹಿಂಬಾಗದ ಟೈರ ಒಡೆದು ಕ್ರೂಸರ ಮುಂಭಾಗದಲ್ಲಿ ಜಖಂಗೊಂಡಿದೆ ಎಂದರೆ ಸರಿ. ಸದರಿ ಭಾವಚಿತ್ರವನ್ನು ಸಾಕ್ಷಿ ಗುರುತಿಸಿದ ಕಾರಣ ಭಾವಚಿತ್ರವನ್ನು ನಿಡಿ-**1** ಎಂದು ಗುರುತಿಸಲಾಯಿತು. ಆರೋಪಿ ವಾಹನವನ್ನು ಕಾಳಜಿಯಿಂದ ಹಾಗೂ ನಿಧಾನವಾಗಿ ಚಲಾಯಿಸುತ್ತಿದ್ದರೂ ನನ್ನ ಮಗನೇ ಅತಿ ವೇಗವಾಗಿ ವಾಹನವನ್ನು ಚಲಾಯಿಸಿಕೊಂಡು ಬಂದು ವಾಹನದ ಮೇಲೆ ಹಿಡಿತ ತಪ್ಪಿ ಕ್ರೂಸರ ಬಲಗಡೆ ಹಿಂಬಾಗದ ಗಾಲಿಗೆ ಡಿಕ್ಕಿಪಿಡಿಸಿ ಮೃತಪಟ್ಟಿರುತ್ತನೆ ಎಂದರೆ ಸರಿಯಲ್ಲ. ಆರೋಪಿಯ ವಾಹನದ ಕಾಗದ ಪತ್ರಗಳು ಸರಿಯಾಗಿರಿ ಇದ್ದ ಕಾರಣ ಪರಿಹಾರಧನವನ್ನು ಪಡೆಯುವ ಉದ್ದೇಶದಿಂದ ಆರೋಪಿ ವಿರುದ್ದ ಸುಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಕೆಎ-**32**/ಇಸಿ-**4466** ನನ್ನ ಹೆಸರಿನಲ್ಲಿ ಇರುತ್ತದೆ. ಅಪಘಾತವಾದ ದಿನದಂದು ನಮ್ಮ ವಾಹನಕ್ಕೆ ವಿಮೆ ಮುಕ್ತಾಯವಾಗಿತ್ತು. ಅಪಘಾತವಾದ ದಿನದಂದು ನನ್ನ ಮಗನಿಗೆ ಲೈಸನ್ಸ ಇತ್ತು. ಲೈಸನ್ಸನ್ನು ನಾವು ಪೋಲಿಸರಿಗೆ ನೀಡಿರುವುದಿಲ್ಲ. ಪೋಲಿಸರು ನನ್ನ ಮಗನಿಗೆ ಲೈಸೆನ್ಸ ಇರುವ ಬಗ್ಗೆ ನಮಗೆ ಕೇಳಿರುವುದಿಲ್ಲ. ನನ್ನ ಮಗ ಚಲಾಯಿಸುತ್ತಿದ್ದ ವಾಹನಕ್ಕೆ ವಿಮೆ ಇಲ್ಲದ ಕಾರಣ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತತೇವೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಆರೋಪಿಯದು ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.